All India Radio: Bangalore
National Bulletins In Kannada
11.07.2025 / 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><*<><>*><>

ಮುಖ್ಯಾಂಶಗಳು

೧. ಆಕ್ಸಿಯಂ-೪ ಮಿಷನ್‌ನ ಭೂಮಿಗೆ ಮರಳುವ ಯಾನ ಇದೇ ೧೪ರಂದು ಆರಂಭ

೨. ಅನಿಶ್ಚಿತ ಜಗತಿನಲ್ಲಿ ವಿಶ್ವಾಸಾರ್ಹ ಪಾಲುದಾರ ರಾಷ್ಟ್ರ ಭಾರತ - ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್

೩. ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ತನಿಖಾ ಪರಿಶೀಲನಾ ಅಭಿಯಾನ: ಚುನಾವಣಾ ಆಯೋಗದಿಂದ ಶೇಕಡ ೬೬ ರಷ್ಟು ಮಾಹಿತಿ ಸಂಗ್ರಹ

೪. ಸುಗಮವಾಗಿ ಸಾಗಿದ ಅಮರನಾಥ ಯಾತ್ರೆ ; ದರ್ಶನ ಪಡೆದ ಯಾತ್ರಾರ್ಥಿಗಳ ಸಂಖ್ಯೆ ೧ ಲಕ್ಷದ ೪೫ ಸಾವಿರದ ೭೧೬ಕ್ಕೆ ಏರಿಕೆ

೫. ಫಿಡೆ ಮಹಿಳಾ ವಿಶ್ವ ಚೆಸ್ ಕಪ್ ; ನಾಲ್ವರು ಭಾರತೀಯ ಆಟಗಾರ್ತಿಯರು ಮೂರನೇ ಸುತ್ತಿಗೆ ಪ್ರವೇಶ

><><><><><><><><><><

ಭಾರತೀಯ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಮತ್ತು ಇತರ ಮೂವರು ಸಿಬ್ಬಂದಿಯ ಅಕ್ಸಿಯಂ-೪ ಮಿಷನ್‌ನ ಭೂಮಿಗೆ ಮರಳುವ ಯಾನ ಇದೇ ೧೪ರಂದು ಆರಂಭವಾಗಲಿದೆ ಎಂದು ನಾಸಾ ತಿಳಿಸಿದೆ. ನಾಸಾದ ವಾಣಿಜ್ಯ ಸಿಬ್ಬಂದಿ ಕಾರ್ಯಕ್ರಮದ ವ್ಯವಸ್ಥಾಪಕ ಸ್ಟೀವ್ ಸ್ಟಿಚ್ ಈ ಕುರಿತು ಮಾಹಿತಿ ಹಂಚಿಕೊಂಡಿದ್ದು, ಇದೇ ೧೪ ರಂದು ಆಕ್ಸಿಯಂ-೪ ಮಿಷನ್ ಅನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಬೇರ್ಪಡಿಸುವ ಗುರಿಯನ್ನು ನಾಸಾ ಹೊಂದಿದೆ. ಅದರ ಕೆಲ ಗಂಟೆಗಳ ನಂತರ, ಪೆಸಿಫಿಕ್ ಮಹಾಸಾಗರದ ಕ್ಯಾಲಿಫೋರ್ನಿಯಾ ತೀರದ ಬಳಿ ಸ್ಪ್ಲಾಶ್‌ಡೌನ್ ಆಗುವ ನಿರೀಕ್ಷೆಯಿದೆ. ಗ್ರೂಪ್ ಕ್ಯಾಪ್ಟನ್ ಶುಕ್ಲಾ

೧೪ ದಿನಗಳ ಕಾಲ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಪ್ರಥಮ ಭಾರತೀಯರಾಗಿದ್ದಾರೆ. ೧೯೮೪ ರಲ್ಲಿ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ನಂತರ ಬಾಹ್ಯಾಕಾಶಕ್ಕೆ ತೆರಳಿದ ಎರಡನೇ ಭಾರತೀಯ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರ ಈ ಯಾನ ಭಾರತದ ಮಾನವ ಬಾಹ್ಯಾಕಾಶ ಯಾನ 'ಗಗನ್‌ಯಾನ' ಯೋಜನೆಗೆ ಮೊದಲ ಪ್ರಮುಖ ಹಾಗೂ ದೃಢ ಹೆಜ್ಜೆಯಾಗಿದೆ. ಶುಕ್ಲಾ ಅವರು ಏಳು ಭಾರತದ ಸಂಶೋಧನೆಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

><><><><><><><><><><

ಭಾರತ ಒಂದು ವಿಶ್ವಾಸಾರ್ಹ ಆರ್ಥಿಕತೆ, ಜಾಗತಿಕ ಮೌಲ್ಯ ಸರಪಳಿಯಲ್ಲಿ ಒಂದು ವಿಶ್ವಾಸಾರ್ಹ ಪಾಲುದಾರ ರಾಷ್ಟ್ರ ಹಾಗೂ ಈ ಅನಿಶ್ಚಿತ ಜಗತ್ತಿನಲ್ಲಿ ಒಂದು ದೃಢತೆಯ ಸಂಕೇತವಾಗಿ ರೂಪುಗೊಳ್ಳುತ್ತಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಸಿಐಐ-ಐಟಿಸಿ ಸುಸ್ಥಿರತೆ ಪ್ರಶಸ್ತಿ ಸಮಾರಂಭದಲ್ಲಿ ಮಾತನಾಡಿದ ಅವರು, ಜಾಗತಿಕ ಅಶಾಂತಿ ನಡುವೆಯೂ ಭಾರತ ಸಂವಹನದ ಶಾಶ್ವತ ಮತ್ತು ಪ್ರಬಲ ಧ್ವನಿಯಾಗಿ ಹೊರಹೊಮ್ಮಿದೆ ಎಂದು ಅವರು ತಿಳಿಸಿದರು.

><><><><><><><><><><

ಬಿಹಾರದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ತನಿಖಾ ಪರಿಶೀಲನೆ ಎಸ್‌ಐಆರ್ ಅಭಿಯಾನದಡಿ ಶೇಕಡ ೬೬ ರಷ್ಟು ಮತದಾರರ ಮಾಹಿತಿ ಸಂಗ್ರಹಿಸಲಾಗಿದ್ದು, ಅಂತಿಮ ಗಡುವಿಗೆ ಇನ್ನೂ ಎರಡು ವಾರಗಳ ಸಮಯ ಬಾಕಿಯಿದೆ.  ಜೂನ್ ೨೪ ರಿಂದ ಪ್ರಾರಂಭವಾದ ಈ ಅಭಿಯಾನದಲ್ಲಿ ನಿನ್ನೆ ಸಂಜೆ ೬ ಗಂಟೆಯವೇಳೆಗೆ ಒಟ್ಟು ೫.೨೨ ಕೋಟಿ ಮತದಾರರ ಮಾಹಿತಿ ನಮೂನೆಗಳು ಸಂಗ್ರಹವಾಗಿವೆ. ಇದು ರಾಜ್ಯದ ೭.೮೯ ಕೋಟಿ ಪ್ರಸ್ತುತವಿರುವ ಮತದಾರರಲ್ಲಿ ಶೇಕಡ ೬೬.೧೬ ರಷ್ಟಾಗಿದೆ. ಈ ಸಾಧನೆಯ ಹಿಂದೆ ಮತದಾರರ ಸಕ್ರಿಯ ಭಾಗವಹಿಸುವಿಕೆ ಮತ್ತು ೭೭ ಸಾವಿರದ ೮೯೫ ಬೂತ್ ಮಟ್ಟದ ಅಧಿಕಾರಿ - ಬಿಎಲ್‌ಒಗಳ ಸಹಕಾರವಿದೆ ಎಂದು ಭಾರತೀಯ ಚುನಾವಣಾ ಆಯೋಗ ತಿಳಿಸಿದೆ. ಇತ್ತೀಚೆಗೆ

ನೇಮಿಸಲಾದ ೨೦ ಸಾವಿರಕ್ಕಿಂತ ಹೆಚ್ಚು ಹೊಸ ಬಿಎಲ್ಓ ಗಳು ಮತ್ತು ನಾಲ್ಕು ಲಕ್ಷಕ್ಕೂ ಅಧಿಕ ಸ್ವಯಂಸೇವಕರು ಹಿರಿಯ ನಾಗರಿಕರು, ವಿಶೇಷಚೇತನರು ಮತ್ತು ದುರ್ಬಲ ಮತದಾರರಿಗೆ ಸಹಾಯ ಮಾಡುತ್ತಿದ್ದಾರೆ. ಇದಲ್ಲದೆ, ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ವತಿಯಿಂದ ನೇಮಕಗೊಂಡ ೧.೫೬ ಲಕ್ಷ ಬೂತ್ ಮಟ್ಟದ ಏಜೆಂಟ್‌ಗಳು ಕೂಡ ಈ ಅಭಿಯಾನಕ್ಕೆ ಬೆಂಬಲ ನೀಡುತ್ತಿದ್ದಾರೆ. ಈಗಾಗಲೇ ಶೇಕಡ ೯೮ ರಷ್ಟು ಅಂದರೆ ಸುಮಾರು ೭.೭೧ ಕೋಟಿ ನಮೂನೆಗಳನ್ನು ಜೂನ್ ೨೪ರ ವೇಳೆಗೆ ಮತದಾರರ ಪಟ್ಟಿಯಲ್ಲಿದ್ದವರಿಗೆ ವಿತರಿಸಲಾಗಿದೆ. ಈ ಅಭಿಯಾನವು ಇದೇ ೨೫ರ ಗಡುವಿಗೆ ಮುಂಚೆಯೇ ಪೂರ್ಣಗೊಳ್ಳುವ ಸಾಧ್ಯತೆಯಿದೆ ಎಂದು ಆಯೋಗ ತಿಳಿಸಿದೆ. ಈ ನಡುವೆ, ಸುಪ್ರೀಂ ಕೋರ್ಟ್ ನಿನ್ನೆ ಬಿಹಾರದಲ್ಲಿ ನಡೆಯುತ್ತಿರುವ ವಿಶೇಷ ಪರಿಶೀಲನಾ ಅಭಿಯಾನ ಮುಂದುವರಿಸಲು ಅನುಮತಿ ನೀಡಿದೆ. ನ್ಯಾಯದ ಹಿತದೃಷ್ಟಿಯಿಂದ, ಆಧಾರ್, ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿ ಮೊದಲಾದ ಪ್ರಮುಖ ಗುರುತಿನ ದಾಖಲೆಗಳನ್ನು ಪರಿಗಣಿಸುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಿದೆ.

><><><><><><><><><

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ವಿದೇಶ ಪ್ರವಾಸಗಳ ಕುರಿತು ನೀಡಿದ ಹೇಳಿಕೆ ವಿರುದ್ಧ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಅಸಮಾಧಾನ ವ್ಯಕ್ತಪಡಿಸಿದೆ. ಆ ಹೇಳಿಕೆಗಳನ್ನು ಗಂಭೀರ ಮತ್ತು ನಿಂದನೀಯವೆಂದು ಬಣ್ಣಿಸಿರುವ ಸಚಿವಾಲಯ, ಭಾರತವನ್ನು ಮಿತ್ರರಾಷ್ಟ್ರಗಳೊಂದಿಗೆ ಶ್ರದ್ಧೆಯ ಸಂಪರ್ಕದಲ್ಲಿಟ್ಟುಕೊಳ್ಳುವ ಪ್ರಯತ್ನದ ಸಂದರ್ಭದಲ್ಲಿ ಇಂತಹ ಹೇಳಿಕೆಗಳು ಹಾನಿಕಾರಕವೆಂದು ತಿಳಿಸಿದೆ. ಮುಖ್ಯಮಂತ್ರಿ ಮಾನ್ ಅವರ ಹೆಸರನ್ನು ಪ್ರಸ್ತಾಪಿಸದೆ ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಭಾರತ ಸರ್ಕಾರ ಇಂತಹ ಅನವಶ್ಯಕ ಟೀಕೆಗಳಿಂದ ದೂರವಿರುವುದಾಗಿ ಸ್ಪಷ್ಟಪಡಿಸಿದ್ದಾರೆ.

><><><><><><><><><

ಮಳೆಯ ನಡುವೆಯೂ ಅಮರನಾಥ ಪವಿತ್ರ ಗುಹಾ ದೇವಾಲಯದತ್ತ ಭಕ್ತರ ಯಾತ್ರೆ ನಿರಂತರವಾಗಿ ಸಾಗುತ್ತಿದೆ. ಜುಲೈ ೩ರಂದು ಆರಂಭವಾದ ಈ ಯಾತ್ರೆಯ ಎಂಟನೇ ದಿನವಾದ

ನಿನ್ನೆ, ೧೭ ಸಾವಿರದ ೨೨ ಯಾತ್ರಾರ್ಥಿಗಳು ಪವಿತ್ರ ಗುಹೆಯಲ್ಲಿ ಭಗವಾನ್ ಅಮರನಾಥ್‌ರ ದರ್ಶನ ಪಡೆದಿದ್ದಾರೆ. ಇದರೊಂದಿಗೆ ಈವರೆಗೆ ದರ್ಶನ ಪಡೆದ ಯಾತ್ರಾರ್ಥಿಗಳ ಒಟ್ಟು ಸಂಖ್ಯೆ ೧ ಲಕ್ಷದ ೪೫ ಸಾವಿರದ ೭೧೬ಕ್ಕೆ ಏರಿದೆ. ಅಮರನಾಥ್ ಯಾತ್ರೆಯ ಪ್ರಾರಂಭದಿಂದಲೂ ಭಕ್ತರ ಹರಿವು ನಿರಂತರವಾಗಿದ್ದು, ಭದ್ರತಾ ವ್ಯವಸ್ಥೆ ಕಠಿಣಗೊಳಿಸಲಾಗಿದೆ. ಇನ್ನೊಂದೆಡೆ, ಇಂದು ಬೆಳಗಿನ ಜಾವ ಜಮ್ಮುವಿನ ಭಗವತಿ ನಗರ್ ಮೂಲ ಶಿಬಿರದಿಂದ ೬ ಸವಿರದ ೪೮೨ ಯಾತ್ರಾರ್ಥಿಗಳ ತಂಡ ಕಾಶ್ಮೀರದತ್ತ ಪ್ರಯಾಣವನ್ನಾರಂಭಿಸಿದೆ. ಇದು ಈ ವರ್ಷದ ೧೦ನೇ ಬ್ಯಾಚ್ ಆಗಿದ್ದು, ತೀವ್ರ ಭದ್ರತೆಯೊಂದಿಗೆ ಯಾತ್ರಾರ್ಥಿಗಳನ್ನು ಕಳುಹಿಸಲಾಗಿದೆ. ಈ ನಡುವೆ, ಅಮರನಾಥ ಯಾತ್ರೆಯ ಪ್ರಮುಖ ಧಾರ್ಮಿಕ ಆಚರಣೆಗಳಲ್ಲಿ ಒಂದಾದ 'ಛರಿ ಮುಬಾರಕ್' ಭಗವಾನ್ ಶಿವನ ಪವಿತ್ರ ಗದೆಯನ್ನು ಪ್ರತಿನಿಧಿಸುವ ದಂಡ, ಪಹಲ್‌ಗಾಂವ್‌ಗೆ ನಿನ್ನೆ ತಲುಪಿದ್ದು, ಅಮರನಾಥ ಯಾತ್ರೆಗೆ ಸಂಬಂಧಿಸಿದ ಕೆಲವು ಪ್ರಮುಖ ಪಾರಂಪರಿಕ ಪೂಜಾ ವಿಧಾನಗಳಿಗೆ ಚಾಲನೆ ದೊರೆತಿದೆ.

><><><><><><><><><><

ಪವಿತ್ರ ಶ್ರಾವಣ ಮಾಸದ ಕನ್ವಾರ್ ಯಾತ್ರೆ ಇಂದು ಪ್ರಾರಂಭವಾಗಿದ್ದು, ಲಕ್ಷಾಂತರ ಭಕ್ತರು ಹರಿದ್ವಾರ್, ಗೌಮುಖ್ ಮತ್ತು ಗಂಗೋತ್ರಿ ಸೇರಿದಂತೆ ಉತ್ತರಾಖಂಡದ ಪವಿತ್ರ ತಾಣಗಳಿಗೆ ತೆರಳಿ ಗಂಗಾ ನದಿಯ ಪವಿತ್ರ ನೀರನ್ನು ಸಂಗ್ರಹಿಸುತ್ತಿದ್ದಾರೆ.

><><><><><><><><><><

ಅಸ್ಸಾಂನಲ್ಲಿ ಮಾನವ-ಆನೆ ಸಂಘರ್ಷಗಳನ್ನು ತಗ್ಗಿಸಲು 'ಗಜಮಿತ್ರ' ಯೋಜನೆಯನ್ನು ಎಂಟು ಹೆಚ್ಚಿನ ಅಪಾಯದ ಜಿಲ್ಲೆಗಳಲ್ಲಿ ಜಾರಿಗೆ ತರುವ ನಿರ್ಧಾರವನ್ನು ಅಸ್ಸಾಂ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ. ಇದರ ಜೊತೆಗೆ ಆರೋಗ್ಯ ಸೇವೆಗಳನ್ನು ಸುಧಾರಿಸುವ ಮತ್ತು ವಿದ್ಯಾರ್ಥಿಗಳು ಹಾಗೂ ಪಾರಂಪಾರಿಕ ಕಾರ್ಮಿಕರ ಕಲ್ಯಾಣ ಯೋಜನೆಗಳನ್ನು ಬಲಪಡಿಸುವ ತೀರ್ಮಾನಗಳೂ ತೆಗೆದುಕೊಳ್ಳಲಾಗಿದೆ.

><><><><><><><><><><

ಜಾರ್ಜಿಯಾದ ಬಟುಮಿಯಲ್ಲಿ ನಡೆದ ಫಿಡೆ ಮಹಿಳಾ ವಿಶ್ವ ಚೆಸ್ ಕಪ್ ೨೦೨೫ ರಲ್ಲಿ ಭಾರತ ಅದ್ಭುತ ಪ್ರದರ್ಶನ ನೀಡಿದ್ದು, ನಿನ್ನೆ ನಾಲ್ವರು ಆಟಗಾರ್ತಿಯರು ಮೂರನೇ ಸುತ್ತಿನಲ್ಲಿ

ತಮ್ಮ ಸ್ಥಾನಗಳನ್ನು ಖಚಿತಪಡಿಸಿಕೊಂಡಿದ್ದಾರೆ. ಅಗ್ರ ಶ್ರೇಯಾಂಕಿತ ಗ್ರ್ಯಾಂಡ್‌ಮಾಸ್ಟರ್ ಕೊನೆರು ಹಂಪಿ ಎರಡನೇ ಪಂದ್ಯದಲ್ಲಿ ಉಜ್ಬೇಕಿಸ್ತಾನದ ಅಫ್ರುಜಾ ಖಮ್‌ಡಮೋವಾ ಅವರೊಂದಿಗೆ ಡ್ರಾ ಮಾಡಿಕೊಂಡರು. ಈ ಪಂದ್ಯಾವಳಿಯಲ್ಲಿ ಎರಡು ಬಾರಿ ಕಂಚಿನ ಪದಕ ವಿಜೇತೆ ಹರಿಕಾ ದ್ರೋಣವಲ್ಲಿ, ತಮ್ಮ ದೇಶದವರೇ ಆದ ಪಿ.ವಿ. ನಂದಿಧಾ ಅವರನ್ನು ಸೋಲಿಸಿ ೩೨ ರ ಸುತ್ತಿಗೆ ಪ್ರವೇಶಿಸಿದರು. ಇನ್ನು ಆರ್. ವೈಶಾಲಿ ಮತ್ತು ದಿವ್ಯಾ ದೇಶಮುಖ್ ತಮ್ಮ ತಮ್ಮ ಪಂದ್ಯಗಳಲ್ಲಿ ಗೆಲುವು ಸಾಧಿಸಿ ಮೂರನೇ ಸುತ್ತಿಗೆ ಪ್ರವೇಶ ಪಡೆದರು. ಇನ್ನು ಮೊದಲ ಪಂದ್ಯದಲ್ಲಿ ಮಾಜಿ ವಿಶ್ವ ಚಾಂಪಿಯನ್ ಉಕ್ರೇನ್‌ನ ಅನ್ನಾ ಉಶೆನಿನಾ ವಿರುದ್ಧ ಅದ್ಭುತ ಜಯಗಳಿಸಿದ್ದ ವಂತಿಕಾ ಅಗರ್ವಾಲ್ ಎರಡನೇ ಪಂದ್ಯದಲ್ಲಿ ಸೋಲನುಭವಿಸಿದ್ದಾರೆ.

><><><><><><><><><><

ಇಂಗ್ಲೆಂಡ್ ನ ಲಾರ್ಡ್ಸ್‌ನಲ್ಲಿ ನಿನ್ನೆ ಆರಂಭವಾದ ಆಂಡರ್ಸನ್-ತೆಂಡೂಲ್ಕರ್ ಕ್ರಿಕೆಟ್ ಟ್ರೋಫಿಯ, ಮೂರನೇ ಟೆಸ್ಟ್‌ನ ಮೊದಲ ದಿನದಂದು ಇಂಗ್ಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೪ ವಿಕೆಟ್‌ಗೆ ೨೫೧ ರನ್ ಗಳಿಸಿತು. ಜೋ ರೂಟ್ ಅಜೇಯ ೯೯ ರನ್ ಮತ್ತು ಬೆನ್ ಸ್ಟೋಕ್ಸ್ ೩೯ ರನ್‌ಗಳಿಸಿ ಇಂದಿಗೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಇಂದಿನ ದಿನದಾಟ ಅಪರಾಹ್ನ ೩.೩೦ ಕ್ಕೆ ಆರಂಭವಾಗಲಿದೆ. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡಕ್ಕೆ ಭಾರತದ ಮಧ್ಯಮ ವೇಗದ ಬೌಲರ್ ನಿತೀಶ್ ಕುಮಾರ್ ಆರಂಭದಲ್ಲೆ ಬೆನ್ ಡಕೆಟ್ ಮತ್ತು ಜ್ಯಾಕ್ ಕ್ರಾಲಿ ಅವರ ವಿಕೆಟ್ ಕಬಳಿಸಿ ಆಘಾತ ನೀಡಿದರು ನಂತರ  ಜೋ ರೂಟ್ ಮತ್ತು ಓಲಿ ಪೋಪ್ ೧೦೯ ರನ್‌ಗಳ ಜೊತೆಯಾಟದ ಮೂಲಕ ಇಂಗ್ಲೆಂಡ್‌ಗೆ ಚೇತರಿಕೆ ನೀಡಿದರು.

><><><><><><><><><><

ನಮ್ಮ ಮುಂದಿನ ವಾರ್ತಾ ಪ್ರಸಾರ ೧೨ ಗಂಟೆಗೆ

><><><><><><><><><><